**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 06-08-2019**

**ಪಾಟೀ ಸವಾಲು – 4ನೇ ಪ್ರತಿವಾದಿ ಪರ ವಕೀಲರಿಂದ**

ನಾನು 8ನೇ ತರಗತಿಯವರೆಗೆ ಓದಿರುತ್ತೇನೆ. ನನಗೆ ಇಂಗ್ಲೀಷ್ ಓದಲು ಸ್ವಲ್ಪ ಸ್ವಲ್ಪ ಬರುತ್ತದೆ. ನನ್ನ ಪ್ರಮಾಣ ಪತ್ರಿಕೆಗೆ ನ್ಯಾಯಾಲಯದಲ್ಲಿ ಸಹಿ ಮಾಡಿರಬೇಕು. 4ನೇ ಪ್ರತಿವಾದಿಯ ಹೆಸರಿಗೆ ದಾಖಲಾತಿಯಾದ ನಂತರ ನಾನು ಕಂದಾಯ ಇಲಾಖೆಯಿಂದ ರೆವಿನ್ಯೂ ದಾಖಲಾತಿಗಳು ಮತ್ತು ಋಣಭಾರ ಪ್ರಮಾಣ ಪತ್ರಿಕೆ ಪಡೆದುಕೊಂಡಿರುತ್ತೇನೆ. ನಿ.ಪಿ.1 ಮತ್ತು 2 ರಲ್ಲಿ ನನ್ನ ಮತ್ತು ನನ್ನ ತಂದೆಯ ಹೆಸರು ಎಲ್ಲಿಯೂ ಇಲ್ಲ ಎಂದರೆ ಸರಿ. ನಾವು ಮೊಲು ದಾವೆ ಹಾಕಿದಾಗ ತಾಯಿಯ ಹೆಸರು ಮುನಿಯಮ್ಮ ಗಂಡ ಪಿಳ್ಳಪ್ಪ ಎಂದು ಬರೆದಿತ್ತು ಎಂದರೆ ಸಾಕ್ಷಿ ಟೈಪಿಂಗ್ ತಪ್ಪಿನಿಂದ ಆಗಿರಬಹುದು ಎಂದು ಹೇಳುತ್ತಾರೆ. ಈ ದಾವೆಯಲ್ಲಿ ಹಾಕಿರುವ ಅರ್ಜಿಗಳ ಬಗ್ಗೆ ನನಗೆ ಅರಿವಿದೆ ಎಂದರೆ ಸರಿ. ಮಧ್ಯಂತರ ಅರ್ಜಿ ಸಂಖ್ಯೆ 9 ನ್ನು ನಾನೇ ಹಾಕಿದ್ದೇನೆ ಎಂದರೆ ಸರಿ. ಮಧ್ಯಂತರ ಅರ್ಜಿ ಸಂಖ್ಯೆ 9 ರಲ್ಲಿ ನನ್ನ ತಾಯಿಯ ಹೆಸರಿನ ಜೊತೆ ಇದ್ದ ನನ್ನ ತಂದೆಯ ಹೆಸರನ್ನು ಪಿಳ್ಳಪ್ಪ ಎಂಬುದರ ಬದಲಾಗಿ ಪಿಳ್ಳಆಂಜಿನಪ್ಪ ಎಂದು ತಿದ್ದುಪಡಿ ಮಾಡಲು ಅನುಮತಿ ಪಡೆದಿಲ್ಲ ಎಂದರೆ ನನಗೆ ಗೊತ್ತಿಲ್ಲ, ನನ್ನ ವಕೀಲರು ಹೇಳಿದ ಕಡೆ ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ. ನ್ಯಾಯಾಲಯದ ಅನುಮತಿ ಪಡೆಯದೆ ಹೆಸರನ್ನು ತಿದ್ದುಪಡಿ ಮಾಡಿ ನ್ಯಾಯಾಲಯಕ್ಕೆ ಮೋಸ ಮಾಡಿದ್ದೇವೆ ಎಂದರೆ ಸರಿಯಲ್ಲ.

2) ನಾನು ದೊಡ್ಡಭೈರಪ್ಪನವರ ಮೊಮ್ಮಗ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿ ಕೊಟ್ಟಿದ್ದೇನೋ, ಇಲ್ಲವೋ ನಮ್ಮ ವಕೀಲರನ್ನು ಕೇಳಬೇಕು. ಸಾಕ್ಷಿ ಮುಂದುವರಿದು ಸ್ವಲ್ಪ ದಾಖಲಾತಿ ಕೊಟ್ಟಿದ್ದೇನೆ, ಉಳಿದ ದಾಖಲಾತಿ ನನ್ನ ಬಳಿ

ಇದೆ ಎಂಂದು ಹೇಳುತ್ತಾರೆ. ನಾನು ದೊಡ್ಡಭೈರಪ್ಪನ ಮೊಮ್ಮಗ ಎಂದು ತೋರಿಸಲು ನೊಂದಾಯಿತ ದಾಖಲಾತಿಗಳನ್ನು ಹಾಜರು ಮಾಡಿದ್ದೇನೆ. ದೊಡ್ಡಭೈರಪ್ಪನ ಮಗ ಪಿಳ್ಳಾಂಜಿನಪ್ಪ ಎಂದು ತೋರಿಸಲು ಮರಣ ಪ್ರಮಾಣ ಪತ್ರವನ್ನು ಹಾಜರು ಮಾಡಿರುತ್ತೇನೆ. ಯಾವುದೇ ದಾಖಲಾತಿ ಹಾಜರು ಮಾಡದಿದ್ದರೂ ಸಹ ಹಾಜರು ಮಾಡಿದ್ದೇನೆ ಎಂದು ಸಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3) ದೊಡ್ಡಭೈರಪ್ಪನಿಗೆ ಪಟಾಲಪ್ಪ ಎಂಬ ಒಬ್ಬನೆ ಮಗನಿದ್ದ ಎಂದರೆ ಸರಿಯಲ್ಲ. ನಮಗೂ ಮತ್ತು ದಾವಾ ಆಸ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

4) ದೊಡ್ಡಭೈರಪ್ಪನಿಗೆ ಒಟ್ಟು ಐದು ಜನ ಮಕ್ಕಳು. ಅವರೆಂದರೆ ಪಿಳ್ಳಾಂಜಿನಪ್ಪ, ಲಕ್ಷ್ಮಮ್ಮ, ಗೌರಮ್ಮ ಮತ್ತು ಪಟಾಲಪ್ಪ. ಇನ್ನೊಬ್ಬರ ಹೆಸರು ಮರೆತಿರುತ್ತೇನೆ. ಈ ದಾವೆಯಲ್ಲಿ ಸದರಿ ಮೂರು ಜನ ಹೆಣ್ಣುಮಕ್ಕಳನ್ನು ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ದೊಡ್ಡಭೈರಪ್ಪನಿಗೆ ಮೂರು ಜನ ಹೆಣ್ಣುಮಕ್ಕಳಿರುವ ವಿಚಾರ ತಿಳಿಸಿಲ್ಲ ಎಂದರೆ ಸರಿ. ಪಿಳ್ಳಾಂಜಿನಪ್ಪ ಮತ್ತು ಪಟಾಲಪ್ಪ ಅಣ್ಣ ತಮ್ಮಂದಿರು ಎಂದು ತೋರಿಸಲು ಯಾವುದೇ ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿ.

5) ದಾವಾ ಐಟಂ ನಂ.2 ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. 4ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ಏನು ಹೇಳಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ನನ್ನ ವಕೀಲರನ್ನು ಕೇಳಿರುವುದಿಲ್ಲ. ದಾವಾ ಐಟಂ ನಂ.2 ನ್ನು 1999 ರಲ್ಲಿಯೇ 1ನೇ ಪ್ರತಿವಾದಿ ಭೂ ಪರಿವರ್ತನೆ ಮಾಡಿದ್ದಾರೆ ಎಂದರೆ ಸರಿ. ದಾವಾ ಹಾಕುವ

ಸಂದರ್ಭದಲ್ಲಿ ದಾವಾ ನಂ.2 ರಲ್ಲಿ ರೆಸಿಡೆನ್ಷಿಯಲ್ ಲೇಔಟ್ ಆಗಿತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಆಗ ಪ್ರಾರಂಭಿಸಿದ್ದರು ಎಂದು ಹೇಳುತ್ತಾರೆ.

6) ದಾವಾ ಐಟಂ ನಂ.1ನ್ನು 2ನೇ ಪ್ರತಿವಾದಿಗೆ ನನ್ನ ತಂದೆಯ ಸಹಿ ಇಲ್ಲದೇ ಮಾರಾಟ ಮಾಡಿದ್ದಾರೆ.

7) ದಾವಾ ಐಟನಂ .2 ರಲ್ಲಿ ಈಗ ಕಟ್ಟಡಗಳನ್ನು ನಿರ್ಮಾಣ ಮಾಡಿರುತ್ತಾರೆ. ದಾವಾ ಐಟಂ ನಂ.2 ರಲ್ಲಿ ನಾವು ಸ್ವಾಧೀನದಲ್ಲಿ ಇಲ್ಲ. ದಾವಾ ಐಟಂ ನಂ.2 ಕ್ಕೆ ನಾನು ಕಂದಾಯ ಪಾವತಿ ಮಾಡಿಲ್ಲ. ದಾವಾ ಐಟಂ ನಂ.2 ಕ್ಕೂ ನಮಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ತಿಯ ಮೇಲೆ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿಯಿಂದ ಹಣ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲಾ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**